**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ .ಎಂ. ಎಫ್ .ಸಿ. ಕನಕಪುರ.**

**C.C. 1046.2025**

CW-5 PW5

| | | |
|---|---|---|
| ಹೆಸರು | ಃ | ರವಿಕುಮಾರ್ T.M. |
| ತಂದೆಯ ಹೆಸರು | ಃ | ದಿ. ಮುದ್ದಯ್ಯ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ |
| ವಾಸ | ಃ | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 22.05.2026**

ನಾನು 09.08.2024 ರಿಂದ ಇಲ್ಲಿಯವರೆಗೆ ಬನ್ನೇರುಘಟ್ಟ **ರಾಷ್ಟ್ರೀಯ** ಉದ್ಯಾನವನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ನನ್ನ ಸರಹದ್ದಿಗೆ ಬರುವಂತಹ ಹಾರೋಹಳ್ಳಿ ವನ್ಯ ಜೀವಿ ವಲಯದಲ್ಲಿ ದಾಖಲಾಗಿದ್ದಂತಹ ವನ್ಯ ಜೀವಿ ಮೊಕದ್ದಮೆ ಸಂಖ್ಯೆ 2/2016-17 ರಡಿಯಲ್ಲಿ ದಿನಾಂಕ 04.07.2016 ರಂದು ನನಗೆ ಕಡತವನ್ನು ತನಿಖೆಗಾಗಿ ಶ್ರೀಮತಿ ಬಿಂದು , ವಲಯ ಅರಣ್ಯಾಧಿಕಾರಿ , ಹಾರೋಹಳ್ಳಿ ವನ್ಯಜಿವಿ ವಲಯ ರವರು ಸಲ್ಲಿಸಿರುತ್ತಾರೆ. ಅದರಂತೆ ಆರೋಪಿತರಿಗೆ ಹಾಗೂ ಪಿರ್ಯಾದು ದಾರರಿಗೆ , ಸಾಕ್ಷಿದಾರರಿಗೆ ನೋಟಿಸ್ ಅನ್ನು ನೀಡಿ ಅವರ ಹೇಳಿಕೆಗಳನ್ನು ದಾಖಲಿಸುವಂತೆ ತಿಳಿಸಲಾಗಿರುತ್ತದೆ. ಅದರಂತೆ 04.07.2025 ರಂದು ಪಿರ್ಯಾದುದಾರರಾದ ಚಾಸಾ-1 ಹಾಗೂ ಸಾಕ್ಷಿದಾರರನ್ನು ನನ್ನ ಕಛೇರಿಯಲ್ಲಿ ಈ ಮೊಕದ್ದಮೆಗೆ ಸಂಬಂಧಿಸಿದಂತೆ ತಮ್ಮ ಲಿಖಿತ ಹೇಳಿಕೆಗಳನ್ನು

ದಾಖಲಿಸಿಕೊಂಡು ಅದರಂತೆ ದಿನಾಂಕ 06.07.2025 ರಂದು ಆರೋಪಿತರು ಶಿವಮಾದು ಮತ್ತು ಬಸವರಾಜು ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಅವರ ಹೇಳಿಕೆಯಂತೆ ಅವರ ಕಡಿಮೆ ತಿಳುವಳಿಕೆಯಿಂದ ಬಂದೂಕು ಮತ್ತು ಬ್ಯಾಟರಿಯೊಂದಿಗೆ ಅರಣ್ಯವನ್ನು ಪ್ರವೇಶಿಸಿರುವುದನ್ನು ಒಪ್ಪಿ ಕೊಂಡಿರುತ್ತಾರೆ. ಅದರಂತೆ ತನಿಖಾಧಿಕಾರಿಯಾದ ನಾನು ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿದಾರರು ಸಾಕ್ಷಿಗಳ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ರಿಂದ 6 ಎಂದು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎ ಯಿಂದ 6 ಎ ಎಂದು ಗುರುತಿಸಲಾಯಿತು. ಆರೋಪಿಗಳ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು.

ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಮು.ಮಾ. 1 ಮತ್ತು 2 ಅನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು : ಶ್ರೀ ಎಂ.ಎಂ. ವಕೀಲರಿಂದ:**

2016 ರಿಂದ 2024 ರವರೆಗೆ ಯಾವುದೇ ತನಿಖೆಯನ್ನು ಈ ಪ್ರಕರಣದಲ್ಲಿ ಮಾಡಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಆದೇಶದ ಮೇರೆಗೆ ಈ ಪ್ರಕರಣವನ್ನು ತನಿಖೆ ಮಾಡಿರುತ್ತೀರಿ ಎಂದರೆ ಸರಿ . ವಲಯ ಅರಣ್ಯಾಧಿಕಾರಿ ಯನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿರುವುದಿಲ್ಲ ಎಂದರೆ ಸರಿ . ನಿಮ್ಮ ಮುಂದೆ ಆರೋಪಿತರು ಮತ್ತು ಸಾಕ್ಷಿದಾರರು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ , ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ಉಪ ಅರಣ್ಯಾಧಿಕಾರಿ ಯನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇರುವ ಕೈ ಬ್ಯಾಟರಿ ಎಂದರೆ ಸರಿ . ಸದರಿ ಬ್ಯಾಟರಿಯಲ್ಲಿ Switch ಇರುವುದಿಲ್ಲ ಎಂದರೆ ಸರಿ . ಹಣೆಗೆ ಕಟ್ಟಿಕೊಳ್ಳುವ ಪಟ್ಟಿ , ಹೋಲ್ ಇರುವುದಿಲ್ಲ ಎಂದರೆ ಸರಿ . ಮು.ಮಾ. 1 ರಲ್ಲಿ ಮಹಜರ್ ಸಮಯದಲ್ಲಿ ಪಟ್ಟಿ ಇತ್ತು , ಈಗ ಇರುವುದಿಲ್ಲ. ಮು.ಮಾ. 2 ಸುಸ್ಥಿತಿಯಲ್ಲಿ ಈಗ ಇರುವುದಿಲ್ಲ ಎಂದರೆ ಘಟನೆ ನಡೆದ ವೇಳೆಯಲ್ಲಿ ಸುಸ್ಥಿತಿಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಮು.ಮಾ. 1 ಮತ್ತು 2 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಿ, ಆರೋಪಿ ಕೈಯಲ್ಲಿ ಅವುಗಳು ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿಗಳನ್ನು ಮನೆಯಿಂದ ದಸ್ತಗಿರಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ